ಅ) ಬೇತ್ರಿ ಹೊಳೆಯಿಂದ ವಿರಾಜಪೇಟೆಗೆ ನೀರು ಸರಬರಾಜು ಮಾಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ? ಹಾಗಿದ್ದಲ್ಲಿ ಸರ್ಕಾರದ ಮುಂದಿದೆಯೇ? ಹಾಗಿದ್ದಲ್ಲಿ ಆ ಯೋಜನೆಯ ಅಂದಾಜು ವೆಚ್ಚವೆಷ್ಟು? ಹಾಗೂ ಯಾವ ವರ್ಷದಲ್ಲಿ ಕೆಲಸ ಕೈಗೊಳ್ಳಲು ಸರ್ಕಾರ ಯೋಚಿಸುತ್ತಿದೆ?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಹೌದು. ವಿರಾಜಪೇಟೆ ನೀರು ಸರಬರಾಜು ಮಾಡುವ ಕಾರ್ಯ ಪುರಸಭೆ ಮಾಡುತ್ತಿದೆ. ಆದರೆ ಬರಪರಿಹಾರ ಕಾಮಗಾರಿ ಅಡಿಯಲ್ಲಿ ಮಡಿಕೇರಿ ಜಿಲ್ಲಾಧಿಕಾರಿಯವರು ಜನವರಿ 96 ರಲ್ಲಿ 1.54 ಲಕ್ಷ ರೂ.ಗಳನ್ನು ಮಂಡಳಿಗೆ ನೀಡಿದ್ದು ಅದರಲ್ಲಿ 3 ಬೋರವೆಲಗಳನ್ನು ಕೊರೆದು ಕೈಪಂಪು ಅಳವಡಿಸಿಲಾಗಿದೆ. ಜಿಲ್ಲಾಧಿಕಾರಿಯವರಿಗೆ ಪುನಃ ಒಟ್ಟು 5.36 ಲಕ್ಷ (2.36+3.0) ರೂ.ಗಳಿಗೆ ಬರಪರಿಹಾರ ಕಾಮಗಾರಿಯಡಿಯಲ್ಲಿ 11 ಬೋರವೆಲಗಳನ್ನು ಕೊರೆಯಲು ಅಂದಾಜುಗಳನ್ನು ತಯಾರಿಸಿ ಸಲ್ಲಿಸಲಾಗಿದೆ. ಈ ಹಣಸಂದಾಯವಾದ ಕೂಡಲೇ ಕೆಲಸವನ್ನು ಪ್ರಾರಂಭಿಸಲಾಗುವುದು.

ಆ) ಸಧ್ಯಕ್ಕೆ ಈ ಬಗ್ಗೆ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದೆ ಬಂದಿರುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಲು ಶಾಸಕರುಗಳ ಸಮಿತಿ.

552 - ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಲು ಶಾಸಕರುಗಳನ್ನೊಳಗೊಂಡಂತೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ನೇಮಕ ಮಾಡಲು ಸರ್ಕಾರ ನಿರ್ಧರಿಸಿದೆಯೇ?

ಆ) ನಿರ್ಧರಿಸಿದ್ದಲ್ಲಿ, ಯಾವಾಗ ಸಮಿತಿಯನ್ನು ರಚಿಸಲಾಗುವುದು?

ಇ) ಹಾಗಿದ್ದಲ್ಲಿ ಇದು ಎಂದಿನಿಂದ ತನ್ನ ಸಭೆಗಳನ್ನು ನಡೆಸುವುದು?

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಂ.ಆರ್.ಪಿ.ಎಲ್. ಯೋಜನೆಗೆ ಸಂಬಂಧಿಸಿದಂತೆ ಸರ್ಕಾರದ ಮಾರ್ಗಸೂಚಿಗಳು ನಿರ್ಧಾರಗಳು ಆದೇಶಗಳನ್ನು ಜಾರಿ ಮಾಡುವ ವಿಚಾರದಲ್ಲಿ ಮತ್ತು ಈ ಯೋಜನೆಗೆ ಸಂಬಂಧಿಸಿದಂತೆ ಸಾಮಾಜಿಕ, ಆರ್ಥಿಕ ಮತ್ತು ಮೂಲಭೂತ ಸೌಕರ್ಯಗಳ ಕಾರ್ಯಗಳ ಅನುಷ್ಠಾನದ ಬಗ್ಗೆ ನಿಗಾ ವಹಿಸಲು ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ನಾಗರೀಕ ಸಮಿತಿಯನ್ನು 22.2.96 ರಂದು ರಚಿಸಿ ಸರ್ಕಾರದ ಆದೇಶ ಹೊರಡಿಸಿದೆ.

ಇ) ಇದು ಶೀಘ್ರದಲ್ಲಿಯೇ ತನ್ನ ಸಭೆಗಳನ್ನು ನಡೆಸುವುದು.